ಶ್ರೀ ಎ. ಮುನಿಯಪ್ಪ.—ಅಲ್ಲಿಪುರ ಮತ್ತು ಹೊನ್ನೂರು ಗ್ರಾಮಗಳಲ್ಲಿ ಡಾಕ್ಟರಿಲ್ಲವೆ ಅಥವಾ ಸೂಲಗಿತ್ತಿ ಇಲ್ಲವೆ?

ಶ್ರೀ ಕೆ. ಕೆ. ಹೆಗ್ಗಡೆ.—ಡಾಕ್ಟರಿಲ್ಲ.

ಶ್ರೀ ಎ. ಮುನಿಯಪ್ಪ—ಎಷ್ಟು ದಿವಸಗಳಿಂದ?

ಶ್ರೀ ಕೆ. ಕೆ. ಹೆಗ್ಗಡೆ.—ಒಂದು ವರ್ಷದಿಂದ ಇಲ್ಲ. ಆದರೆ ನೆರೆಯ ಆಸ್ಪತ್ರೆಗಳಿಂದ ಡಾಕ್ಟರು ಅಲ್ಲಿಗೆ ಹೋಗಿ ಔಷಧಿ ಕೊಡಬೇಕೆಂದು ಹೇಳಿದೆ.

ಶ್ರೀ ಎ. ಮುನಿಯಪ್ಪ.—ಸೂಲಗಿತ್ತಿ ಇಲ್ಲದಿರುವ ಆಸ್ಪತ್ರೆಯಿಲ್ಲವೆಂದು ಹೇಳಿದೆ. ಈ ದಿವಸ ಎಲ್ಲೂ ಇಲ್ಲವೆ! ಈ ಪ್ರಶ್ನೆ ಬಂದಮೇಲೆ ಅಲಾಟ್ ಮಾಡಿದ್ದೀರಾ?

ಶ್ರೀ ಕೆ. ಕೆ. ಹೆಗ್ಗಡೆ.—ಈಗ ಎಲ್ಲಾ ಆಸ್ಪತ್ರೆಗಳಲ್ಲೂ ಸೂಲಗಿತ್ತಿಗಳಿದ್ದಾರೆ.

ಶ್ರೀ ಎಸ್. ಆರ್. ರಾಮಯ್ಯ.—ಗ್ರಾಮಾಂತರ ಗಳಲ್ಲಿ ಡಾಕ್ಟರುಗಳಿಲ್ಲವೆಂದು ಹೇಳುತ್ತೀರಿ. ಅವರ ಕಷ್ಟವೇನಿದೆ ಎಂಬುದು ಗಮನಕ್ಕೆ ಬಂದಿದೆಯೆ?

ಅಧ್ಯಕ್ಷರು.—ಆ ಪ್ರಶ್ನೆ ಬರುವುದಿಲ್ಲ.

ಶ್ರೀ ಎಸ್. ಆರ್. ರಾಮಯ್ಯ.—ಈ ಗ್ರಾಮಗಳಲ್ಲಿ ಅನೇಕ ವರ್ಷಗಳಿಂದ ಡಾಕ್ಟರುಗಳಿಲ್ಲದೆ ತೊಂದರೆಯಾಗಿರುವುದು ಗಮನಕ್ಕೆ ಬಂದಿಲ್ಲವೆ?

ಶ್ರೀ ಕೆ. ಕೆ. ಹೆಗ್ಗಡೆ.—ಕೋಲಾರ ಜಿಲ್ಲೆಯಲ್ಲಿ ಒಂದು ಸ್ಪೆಷಲ್ ಫೀಚರ್ ಎಂದರೆ ಎರಡುಮೂರು ಮೈಲಿಗಳ ದೂರದಲ್ಲಿ ಡಾಕ್ಟರಿರುತ್ತಾರೆ. ಅವರು ನಣ್ಣ ಊರು ಗಳಿಗೆ ಹೋಗುವುದಕ್ಕೆ ಒಪ್ಪುವುದಿಲ್ಲ ಮತ್ತು ಅಲ್ಲಿ ವಸತಿ ಸೌಕರ್ಯ ಕಡಮೆ. ಕೆಲವೊಂದು ಆಸ್ಪತ್ರೆಗಳಲ್ಲಿ ಜನರು ಬರುವುದೂ ಕಡಮೆ.

ಶ್ರೀ ಇ. ನಾರಾಯಣಗೌಡ.—ಬಂಗಾರಪೇಟೆ ತಾಲ್ಲೂಕು ಬೂದಿಕೋಟೆ ಆಸ್ಪತ್ರೆಯಲ್ಲಿ ಡಾಕ್ಟರಿದ್ದಾರೆಯೇ?

ಶ್ರೀ ಕೆ. ಕೆ. ಹೆಗ್ಗಡೆ.—ಅದು ಮೆಡಿಕಲ್ ಇಲಾಖೆಗೆ ಸೇರಿಲ್ಲ, ಹೆಲ್ತ್ ಇಲಾಖೆಗೆ ಸಂಬಂಧಪಟ್ಟದೆ.

Sri G. SIVAPPA.—Has it come to the notice of government that there are a unmber of doctors who have passed LMP and standing before the doors of the office for appointment?

ಶ್ರೀ ಕೆ. ಕೆ. ಹೆಗ್ಗಡೆ.—ಸರಕಾರಕ್ಕೆ ಗೊತ್ತಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಡಾಕ್ಟರುಗಳಿಗೆ ವಸತಿ ಸೌಕರ್ಯ ಇಲ್ಲದೇ ಇರುವುದರಿಂದ ಅಂಥಲ್ಲಿರುವ ಆಸ್ಪತ್ರೆಗಳಿಗೆ ಡಾಕ್ಟರುಗಳು ಹೋಗುವುದಿಲ್ಲ ಅಲ್ಲವೆ?

ಶ್ರೀ ಕೆ. ಕೆ. ಹೆಗ್ಗಡೆ.—ಅದನ್ನು ಈಗಾಗಲೇ ಒಪ್ಪಿಕೊಂಡಿದ್ದೇನೆ.

ಶ್ರೀ ಎ. ಮುನಿಯಪ್ಪ.—ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರರು ಏನಾದರೂ ವರದಿ ಕಳಿಸಿದ್ದರ ಮೇಲೆ ಕಾರ್ಯಕ್ರಮತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ಕೆ. ಹೆಗ್ಗಡೆ.—ಅದರ ಮೇಲೆಯೇ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎ. ಮುನಿಯಪ್ಪ.—ಆ ಭಾಗದಲ್ಲಿ 2-3 ಆಸ್ಪತ್ರೆಗಳು ಇವೆ ಎಂದು ಹೇಳಿದಿರಿ. ಹಾಗೆ ಇದ್ದರೆ ಆಆಸ್ಪತ್ರೆಗಳ ಹೆಸರು ಏನು?

ಶ್ರೀ ಕೆ. ಕೆ. ಹೆಗ್ಗಡೆ.—ಎರಡು ಮೂರು ಎಂದು ಹೇಳಲಿಲ್ಲ. ನಾಲ್ಕು ಐದು ಆಸ್ಪತ್ರೆಗಳು ಹತ್ತರ ಹತ್ತರದಲ್ಲಿಯೇ ಇವೆ. ಆಸ್ಥಳದಲ್ಲಿ ವಸತಿ ಸೌಕರ್ಯವಿಲ್ಲದ ಕಾರಣ ಡಾಕ್ಟರಗಳಿಗೆ ಅನನುಕೂಲ ವಿರುವುದರಿಂದ ಹೋಗಲಿಕ್ಕೆ ಒಪ್ಪುವದಿಲ್ಲ. ಅದೂ ಅಲ್ಲದೆ ಆ ಆಸ್ಪತ್ರೆಯಲ್ಲಿ attendance ಕೂಡ ಬಹಳ ಕಡಮೆ ಇದೆ.

Officers in the Agricultural Department deputed for specialized Training.

Q.—2507. Sri A. S. PATIL (Nargund).—

Will the Government be pleased to state:—

(*a*) the number of officers from the Agricultural Department who have been sent till now after the Reorganisation of the States for specialised higher training in the Agricultural Research Institute, Peesa (Delhi);

(*b*) the number of such officers coming from the integrated areas of Bombay, Madras, Hyderabad, Coorg and Old Mysore respectively?

A.—Sri K. F. PATIL (Minister for Agriculture and Food).

(*a*) Four.

(*b*) All the four belong to the old Mysore area.

ಶ್ರೀ ಕೆ. ಎಫ್. ಪಾಟೀಲ್.—ಈ ಪ್ರಶ್ನೆಗೆ ಒಂದು ಸಣ್ಣ ತಿದ್ದುಪಡಿ ಇದೆ. ಈ ಪ್ರಶ್ನೆ ಮತ್ತು ಉತ್ತರ ಆಚ್ಚಾದ ಮೇಲೆ ನಾಲ್ಕು ಜನರನ್ನ ಟ್ರೇನಿಂಗಿಗೆ ಕಳಿಸಲಾಗಿದೆ. ಅವರಲ್ಲಿ ಮುಂಬಯಿ ಮತ್ತು ಹೈದರಾಬಾದ್ ಪ್ರದೇಶದವರು ಸಹ ಇದ್ದಾರೆ.

Sri A. R. PANCHAGAVI.—In what year these officers were sent and in what year the decision was taken by Government?

Sri K. F. PATIL.—The decision was taken on 21st September 1957 and they were sent immediately after that.

Sri B. V. DESAI.—With regard to Gulbarga and Belgaum Divisions can you give a break-up?

ಶ್ರೀ ಕೆ. ಎಫ್. ಪಾಟೀಲ್.—ಇತ್ತೀಚೆಗೆ ಟ್ರೇನಿಂಗಿಗೆ ಕಳಿಸಿದವರ ಪೈಕಿ ಇಬ್ಬರು ಗುಲ್ಬರ್ಗಾ ಡಿವಿಜನ್ನಿನವರು, ಒಬ್ಬರು ಬೆಳಗಾಂಡಿವಿಜನ್ ಮತ್ತು ಮತ್ತೊಬ್ಬರು ಹಳೆಯ ಮೈಸೂರು ಡಿವಿಜನ್ನಿನವರು ಹೀಗೆ ಇದ್ದಾರೆ.

Dr. R. NAGAN GOWDA.—May I know how many are being sent this year?

Sri K. F. PATIL.—Four, this year, I said.

Sri G. SIVAPPA.—Is it proper for the Government to select for higher training on the district basis?

Sri K. F. PATIL.—It is not done so. When the members asked for information districtwise, I have given figures.

Sri M. C. NARASIMHAN.—May I know the reason why in the matter of selection the Public Service Commission is not co sulted?

ಶ್ರೀ ಕೆ. ಎಫ್. ಪಾಟೀಲ್.—ಪಬ್ಲಿಕ್ ಸರ್ವಿಸ್ ಕಮಿಷನ್ ಅವರು ಸೆಲೆಕ್ಟ್ ಮಾಡಿದವರನ್ನೇ ನಮ್ಮಿಸ್ಸಿನಲ್ಲಿ ಇದ್ದವರನ್ನು ಟ್ರೇನಿಂಗಿಗೆ ಕಳಿಸಲಾಗಿದೆ. ಯಾವ ಯಾವ ವಿಷಯದಲ್ಲಿ ಟ್ರೇನಿಂಗ ಬೇಕಾಗಿದೆಯೋ ಅಂಥ ಡಿಪಾರ್ಟಮೆಂಟಿನವರನ್ನೇ ಟ್ರೇನಿಂಗಿಗೆ ಕಳಿಸಿದೆ.

Repairs to the Streams on the Road between Bijapur and Morbagi.

Q.—2544. Sri S. Y. PATIL (Sindgi). —

Will the Government be pleased to state :—

(a) the length of the road from Bijapur to Morbagi and the number of streams thereon ;

(b) whether they have taken adequate steps to effect repairs to the above streams ?

(c) if not, whether they propose to take steps in that behalf?

A.—Sri H. M. CHANNABASAPPA (Minister for Public Works and Electricity).—

(a) The road referred to is presumably Bijapur-Moratgi. The length of the road is 50 miles and there are about 47 nallas crossing the road.

(b) Yes.

(c) Does not arise in view of (b) above.

ಶ್ರೀ ಎಸ್. ವೈ. ಪಾಟೀಲ್.—(b) ಪ್ರಶ್ನೆಗೆ ಹೌದು ಎಂದು ಉತ್ತರ ಹೇಳಿದ್ದೀರಿ. ಹಾಗಾದರೆ ಆ ರಸ್ತೆಯಲ್ಲಿರುವತಕ್ಕ ಈ 47 ಹಳ್ಳಗಳ ಪೈಕಿ ಎಷ್ಟು ಹಳ್ಳಗಳಿಗೆ ಪೂಲು ಕಟ್ಟಿಸಿದ್ದೀರಿ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಈ 47 ಹಳ್ಳಗಳ ಪೈಕಿ, ವಿಜಾಪುರ ಹಿಪ್ಪರಗಿ ರಸ್ತೆಯಲ್ಲಿ 27 ಹಳ್ಳಗಳು ಇವೆ. ಹಿಪ್ಪರಗಿ ಸಿಂದಗಿ ರಸ್ತೆಯಲ್ಲಿ ಒಂಭತ್ತು ಹಳ್ಳಗಳಿವೆ. ಸಿಂದಗಿ ಮೊರಟಗಿ ರಸ್ತೆಯಲ್ಲಿ 11 ಹಳ್ಳಗಳಿವೆ. ಅವುಗಳ ಪೈಕಿ ವಿಜಾಪೂರ ಹಿಪ್ಪರಗಿ ಸೆಕ್ಷನ್‌ನಲ್ಲಿ ಈಗಾಲೇ ಎರಡು ಹಳ್ಳಗಳಿಗೆ ಸೇತುವೆ ಕಟ್ಟಿಸಲಾಗಿದೆ. 197 ಮೈಲು ಎರಡು ಫರ್ಲಾಂಗ ಕಡೆ ಒಂದು 17 ಸಾವಿರ ರೂಪಾಯಿ ಖರ್ಚುಮಾಡಿ ಕಟ್ಟಿಸಲಾಗಿದೆ. ಹಿಪ್ಪರಗಿ ಸಿಂದಗಿ ರಸ್ತೆಯಲ್ಲಿ 223 ಮೈಲಿ ಕಡೆ ಒಂದು ಸೇತುವೆ ಕಟ್ಟಿಸಿದೆ. ಇದಲ್ಲದೆ 224 ಮೈಲಿ ಹತ್ತಿರ ಒಂದು ಮತ್ತು 222 ಮೈಲಿ ಹತ್ತಿರ ಒಂದು ಸೇತುವೆ, 1ಲಕ್ಷ 85ಸಾವಿರ ರೂಪಾಯಿ ಖರ್ಚಿನಲ್ಲಿ ಮೂರು ಸೇತುವೆ ಕಟ್ಟಿಸತಕ್ಕದ್ದು ಇದೆ. ಸಿಂದಗಿ ಮೊರಟಗಿ ರಸ್ತೆಯಲ್ಲಿ ಇನ್ನೂ ಯಾವ ಸೇತುವೆಯನ್ನೂ ಕಟ್ಟಿಲ್ಲ. ಈ ಸೇತುವೆಗಳ ಬಗ್ಗೆ ಅಂದಾಜು ತಯಾರು ಆಗುತ್ತಾ ಇದೆ ಒಂದು ವರ್ಷದಲ್ಲಿ ತಯಾರು ಮಾಡಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಸ್. ವೈ. ಪಾಟೀಲ್.—ಈ ವಿಜಾಪೂರ-ಮೊರಟಗಿ ರಸ್ತೆ ಹೈದ್ರಾಬಾದಿನಿಂದ ರತ್ನಗಿರಿವರೆಗೆ ಇರುವ ರಸ್ತೆಯಾಗಿರುವುದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು. ಇದು ಗುಲಬರ್ಗದವರೆಗೆ ಹೋಗುತ್ತದೆ.

ಶ್ರೀ ಎಸ್. ವೈ. ಪಾಟೀಲ್.—60 ಮೈಲಿ ಅಂತರದಲ್ಲಿ 47 ಹಳ್ಳಗಳು ಈ ರಸ್ತೆಯಲ್ಲಿ ಇರುವುದರಿಂದ ಈ ರಸ್ತೆಯ ಮೇಲಿನ ಸಂಚಾರ ಪರಿಸ್ಥಿತಿ ಬಹಳ ಕಠಿಣವಾಗಿರುವುದಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—47 ಹಳ್ಳಗಳು ಇರುವ ಮೂಲಕ ಪರಿಸ್ಥಿತಿ ಕಠಿಣವಾಗಿರುವುದನ್ನು ಈಗ ಸರಿಮಾಡಬೇಕೆಂಬುದೇ ಸರಕಾರದ ಉದ್ದೇಶ.

ಶ್ರೀ ಎಸ್. ವೈ. ಪಾಟೀಲ್.—ಪೂಲ ಕಟ್ಟುವ ಕಾಲದಲ್ಲಿ ಹಳ್ಳದಲ್ಲಿಯ ನೀರನ್ನು ನೀರಾವರಿಗಾಗಿ ಉಪಯೋಗಿಸಲು ಬರುವಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪೂಲು ಕಟ್ಟುವುದಕ್ಕೂ ನೀರಾವರಿ ಯೋಜನೆ ಮಾಡುವುದಕ್ಕೂ ಒಂದಕ್ಕೊಂದು ಸಂಬಂಧವಿಲ್ಲ.

ಶ್ರೀ ಎಸ್. ವೈ. ಪಾಟೀಲ್.—ಪೂಲು ಕಟ್ಟುವಾಗ ಅಲ್ಲಲ್ಲಿ ಕಲ್ಲುಗಳನ್ನು ಹಾಕಿ ನೀರನ್ನು ಹೊಲಗಳಿಗೆ ತೆಗೆದುಕೊಳ್ಳಲು ಬರುತ್ತದೆ ಎಂಬುದು ಕಂಡು ಬಂದಿಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿ ಮಾಡಲು ಬರುವುದು ಎಂದು ಇಂಜಿನಿಯರುಗಳು ಸಲಹೆ ಮಾಡಿದರೆ ಅದಕ್ಕೆ ಸರಕಾರವು ಅಭ್ಯಂತರವೇನೂ ಇಲ್ಲ.

Issue of Temporary Permits by the Regional Transport Officers.

Q.—2767. Sri U. S. NAYAK (Udipi).—

Will the Government be pleased to state :—

(a) whether they are aware that indiscriminate temporary permits are being issued by the Regional Transport Officers to the detriment of permanent operators on the routes ;

(b) the policy of the Government in the matter of issuing temporary permits ;

(c) whether they are aware that several applications for transfer of permits have been rejected by the various Regional Transport Authorities of the State ;

(d) whether they would allow transfer of permits to form viable units in keeping with the recommendation of the Planning Commission ?

A.—Sri B. D. JATTI (Chief Minister).—